
## ದೇವರ ತೇರಿಗೂ ಗಾಲಿಗಳು ಬೇಕು

ಭವ್ಯ ಕಬ್ಬಳಿ ಹಾಸನ ಜಿಲ್ಲೆಯ ಕಬ್ಬಳಿಯವರು. ಸದ್ಯ ಕೊಡಗು ನಿವಾಸಿ. ಕಾಫಿ ಬೆಳೆಗಾರ್ತಿ. 'ದೇವರ ತೇರಿಗೂ ಗಾಲಿಗಳು ಬೇಕು' ಅವರ ಚೊಚ್ಚಿಲ ಸಂಕಲನ.

ಪುಟ್ಟ ದೇಹದಿಂದ ಹಾಗೂ ಚುರುಕು ಮಾತುಗಳಿಂದ ಭವ್ಯ ಅವರ ಕವಿತೆಗಳು ಗಮನಸೆಳೆಯುತ್ತವೆ. ಗಹನ ವಿಚಾರಗಳೂ ಹೂಹಗುರವೆನ್ನುವಂತೆ ನಿರೂಪಣೆಗೊಂಡಿರುವುದು ಕವಿತೆಗಳ ಹೊಳಪನ್ನು ಹೆಚ್ಚಿಸಿದೆ. ಕಾವ್ಯ ಕಟ್ಟುವುದು, ಕಾವ್ಯದ ಜೊತೆಜೊತೆಗೇ ಬದುಕನ್ನೂ ಕಟ್ಟಿಕೊಳ್ಳುವುದು ಎನ್ನುವ ಅರಿವು ಇಲ್ಲಿನ ರಚನೆಗಳಲ್ಲಿ ಇರುವಂತಿದೆ.




ಕಾವ್ಯಸಖ್ಯದ ಆರಂಭದ ದಿನಗಳಲ್ಲಿ ಮಾತು ಹೆಚ್ಚು. ಭವ್ಯ ಅವರೂ ಮಾತುಗಾರ್ತಿಯೇ. (ಸಂಕಲನದಲ್ಲಿ ಮೊದಲ ಕವಿತೆ ಇಪ್ಪತ್ತನಾಲ್ಕು ಪುಟಗಳ ನಂತರ ಎದುರಾಗುತ್ತದೆ.) ಕವಿತೆಗಳನ್ನು ವಿಷಯವಾರು ವಿಂಗಡಿಸಿರುವ ಕ್ರಮ, ಪುಸ್ತಕದ ವಿನ್ಯಾಸ, ರೇಖೆಗಳ ಜುಗಲಬಂದಿ ಸೇರಿದಂತೆ ಇಡೀ ಸಂಕಲನದ ಸ್ವರೂಪ ಮಾತು ಮತ್ತು ಅರ್ಥಕ್ಕೆ ಒತ್ತು ಕೊಡುವಂತಿದ್ದರೂ, ಈ ಸ್ವರೂಪ ಎದುರಿನವರನ್ನು ಮೆಚ್ಚಿಸುವ ಉಮೇದಿನದಲ್ಲ; ಕವಯಿತ್ರಿಯ ಮಾತು ಸ್ವಗತದ ಮಾದರಿಯದು ಎನ್ನುವುದಕ್ಕೆ ಅವರ ಕವಿತೆಗಳೇ ಉದಾಹರಣೆಯಂತಿವೆ. ಇಲ್ಲಿನ ಕವಿತೆಗಳಲ್ಲಿ ಯಾರನ್ನೋ ಮೆಚ್ಚಿಸುವ ಇಲ್ಲವೇ ಬದಲಿಸುವ ಉತ್ಸಾಹ ಕಾಣಿಸುವುದಿಲ್ಲ. ತನಗನ್ನಿಸಿದ್ದನ್ನು ತನಗೇ ಸ್ಪಷ್ಟಪಡಿಸಿಕೊಳ್ಳುವ ಪ್ರಯತ್ನದಲ್ಲಿ ರೂಪುಗೊಂಡ ರಚನೆಗಳಿವು.

'ಕವಿ ಹೃದಯ ಸದಾ ಭಾರವಂತೆ / ಕವಿತೆಗಳನ್ನು ತುಂಬಿಸಿಕೊಂಡು / ಇಲ್ಲವೇ; ಖಾಲಿಯಾಗಿಸಿಕೊಂಡು, / ಸಾಲುಗಳಿಗೆ ರೆಕ್ಕೆ ಕಟ್ಟಿ / ಸ್ವತಂತ್ರವಾಗಿ ಹಾರಲು ಬಿಟ್ಟು / ತಾನು ನೆಲದ ಮೇಲೆಯೆ ಉಳಿದುಕೊಂಡು / ಕ್ಷಮಿಸಿ, ಕವಿ ಹೃದಯ ಸದಾ ಭಾರವಂತೆ' ಎನ್ನುವ ಅನುಭವ ಕವಯಿತ್ರಿಯದು. ಕಾವ್ಯದ ಸ್ವರೂಪ ಸೌಂದರ್ಯಕ್ಕೆ ಹಾತೊರೆದರೂ, ಅದರ ಆಳದಲ್ಲಿರುವುದು ವಿಷಾದವೇ ಎನ್ನುವ ನಂಬಿಕೆಯನ್ನು ದೃಢಪಡಿಸುವ ಹಲವು ಸಾಲುಗಳು ಸಂಕಲನದಲ್ಲಿವೆ. 'ನೊಂದವರಲ್ಲಿ ಹುಟ್ಟುವ ಕವಿತೆ/ ಕೊಂದವರಲ್ಲಿ ಹುಟ್ಟುವುದಿಲ್ಲ' ಎನ್ನುವ ಮಾತನ್ನು ವಿಶ್ಲೇಷಿಸುವ ಅಗತ್ಯವಿಲ್ಲ. ಈ ಸಾಲುಗಳ ಜೊತೆಗೇ, 'ಮುಳ್ಳು ತಾಗಿಸಿಕೊಂಡ ಎದೆಯೊಳಗೆ/ ಕವಿತೆ ಹುಟ್ಟುವುದು ಬಹು ಸುಲಭ/ ಮುಳ್ಳು ತಾಕಿಸಿಕೊಂಡ ಎದೆಗೊಳಗೆ/ ಪ್ರೀತಿ ಹುಟ್ಟುವುದೂ ಸುಲಭ' ಸಾಲುಗಳನ್ನೂ ಓದಿ ಕೊಳ್ಳಬಹುದು. ಕಾವ್ಯಪ್ರೀತಿ ಹಾಗೂ ಜೀವನಪ್ರೀತಿಯನ್ನು ಅಭಿನ್ನವಾಗಿ ಕಾಣುವ ಈ ಮನೋಧರ್ಮ ಸಂಕಲನದುದ್ದಕ್ಕೂ ಇದೆ. 'ಅವನು ಅವಳು', 'ದೇವರು', 'ಏಕಾಂತ', 'ಬದುಕು' – ಹೀಗೆ ಕವಿತೆಗಳು ಬೇರೆ ಬೇರೆ ಹಣೆಪಟ್ಟಿ ಹಂಚಿಕೊಂಡರೂ, ಅವುಗಳ ಆಳದಲ್ಲಿರುವುದು ಕವಿತೆಯ ಬಗೆಗಿನ ಹಾಗೂ ಕಾವ್ಯರೂಪಿ ಬದುಕಿನ ಕುರಿತ ಬೆರಗು.

**ದೇವರ ತೇರಿಗೂ ಗಾಲಿಗಳು ಬೇಕು; ಲೇ: ಭವ್ಯ ಕಬ್ಬಳಿ; ಪು: 138; ಬೆ: ರೂ. 100; ಪ್ರ: ತಪಸ್ವಿ ಪುಸ್ತಕ, ಎಚ್.ಎಸ್.ಆರ್. ಎಸ್ಟೇಟ್, ಹಾತೂರು, ವಿರಾಜಪೇಟೆ, ಕೊಡಗು-571213.**